ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 2, May-June 2026, Pp. 1-7
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಸರ್ವಜ್ಞನ ತ್ರಿಪದಿಗಳಲ್ಲಿ ಬಹುಮುಖ ಚಿಂತನೆ

**ಡಾ.ಜಯದೇವ ಸಿರಳ್ಳಿ**
ಕನ್ನಡ ಸಹ ಪ್ರಾದ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಹಾವೇರಿ (ಗಾಂಧಿಪುರ)

***Abstract:***
*ಕನ್ನಡ ಸಾಹಿತ್ಯದ ಪ್ರಮುಖ ವಚನಕಾರ ಹಾಗೂ ಜನಪದ ಕವಿಗಳಲ್ಲಿ ಸರ್ವಜ್ಞರು ವಿಶಿಷ್ಟ ಸ್ಥಾನವನ್ನು ಹೊಂದಿದ್ದಾರೆ. ಅವರ ತ್ರಿಪದಿಗಳು ಸರಳ ಭಾಷೆ, ಆಳವಾದ ಜೀವನಾನುಭವ ಮತ್ತು ಸಾಮಾಜಿಕ ಪ್ರಜ್ಞೆಯಿಂದ ಕೂಡಿವೆ. ಸರ್ವಜ್ಞನ ತ್ರಿಪದಿಗಳಲ್ಲಿ ನೈತಿಕ, ಸಾಮಾಜಿಕ, ಧಾರ್ಮಿಕ, ತಾತ್ವಿಕ, ಶೈಕ್ಷಣಿಕ ಹಾಗೂ ಮಾನವೀಯ ಮೌಲ್ಯಗಳಿಗೆ ಸಂಬಂಧಿಸಿದ ಬಹುಮುಖ ಚಿಂತನೆಗಳು ವ್ಯಕ್ತವಾಗಿವೆ. ಸಮಾಜದಲ್ಲಿನ ಅಂಧಶ್ರದ್ಧೆ, ಜಾತಿ ಭೇದ, ದುರಾಚಾರ ಮತ್ತು ಕಪಟತೆಯನ್ನು ಅವರು ತಮ್ಮ ತ್ರಿಪದಿಗಳ ಮೂಲಕ ತೀಕ್ಷ್ಣವಾಗಿ ವಿಮರ್ಶಿಸಿದ್ದಾರೆ. ಜೊತೆಗೆ, ಸತ್ಯ, ಪ್ರಾಮಾಣಿಕತೆ, ಮಾನವೀಯತೆ ಮತ್ತು ಉತ್ತಮ ಜೀವನ ಮೌಲ್ಯಗಳನ್ನು ಪ್ರತಿಪಾದಿಸಿದ್ದಾರೆ. ಈ ಲೇಖನವು ಸರ್ವಜ್ಞನ ತ್ರಿಪದಿಗಳಲ್ಲಿನ ವಿವಿಧ ಚಿಂತನೆಗಳನ್ನು ವಿಶ್ಲೇಷಿಸುವ ಮೂಲಕ ಅವರ ಸಾಹಿತ್ಯದ ಸಮಕಾಲೀನ ಪ್ರಸ್ತುತತೆಯನ್ನು ಮತ್ತು ಸಮಾಜ ಸುಧಾರಣೆಯಲ್ಲಿ ಅದರ ಮಹತ್ವವನ್ನು ಅಧ್ಯಯನ ಮಾಡುತ್ತದೆ.*

***Keywords:*** *ಸರ್ವಜ್ಞ, ತ್ರಿಪದಿಗಳು, ಸಾಮಾಜಿಕ ಚಿಂತನೆ, ತಾತ್ವಿಕ ಚಿಂತನೆ, ಮಾನವೀಯ ಮೌಲ್ಯಗಳು*

**ಪೀಠಿಕೆ**

ಸರ್ವಜ್ಞನು ಜಾನಪದ ತಳಹದಿಯುಳ್ಳ ಒಬ್ಬ ಕವಿಯಾಗಿದ್ದು, ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾನೆ. ಇವನು ಅಚ್ಚಗನ್ನಡ ಛಂದಸ್ಸಾದ ತ್ರಿಪದಿಯನ್ನು ತನ್ನ ಕಾವ್ಯ ಮಾಧ್ಯಮವನ್ನಾಗಿ ಬಳಸಿಕೊಂಡನು. ತ್ರಿಪದಿಯ ನಿರಾಯಾಸ ಪುಟ್ಟ ಚೌಕಟ್ಟುಗಳು ಜನಸಾಮಾನ್ಯರ ಜೊತೆಯಲ್ಲಿ ತನ್ನ ಅಭಿಪ್ರಾಯಗಳನ್ನು ಹಂಚಿಕೊಳ್ಳಬೇಕೆಂಬ ಗುರಿಯುಳ್ಳ ಸರ್ವಜ್ಞನಿಗೆ ಬಹಳ ಮೆಚ್ಚುಗೆಯಾಗಿವೆ. ಸರ್ವಜ್ಞನು ಮಾರ್ಗ ಕಾವ್ಯದ ಕಥೆ, ವರ್ಣನೆ, ರಸಗಳ ಯಾಂತ್ರಿಕವಾದ ಸವಕಲು ಪಟ್ಟಿಯ ಕಡೆಗೆ ಕಣ್ಣಾಡಿಸಲಿಲ್ಲ. ಆದರೆ ಹೊಸ ಜಾಡಿನಲ್ಲಿ ಸಾಗಿ ಸವಕಲು ಪಟ್ಟಿಯ ನಿಯಮಗಳನ್ನು ಬಿಟ್ಟು ಶ್ರೇಷ್ಠ ಸಾಹಿತ್ಯವನ್ನು ರಚಿಸಿದನು.

ಸರ್ವಜ್ಞನ ತ್ರಿಪದಿಗಳಲ್ಲಿ ಕಥೆ ಇಲ್ಲ, ವರ್ಣನೆ ಇಲ್ಲ. ಆದರೆ ಸಮಗ್ರ ಜೀವನದ ಕಥೆಗಳಿವೆ. ಜೀವನದ ಧರ್ಮವು ಸರ್ವಜ್ಞನ ವಚನಗಳಲ್ಲಿ ರೂಪಗೊಂಡಿದೆ. ಅವುಗಳಲ್ಲಿ ಬರಿ ನೀತಿ ಬೋಧಕಗಳಿರದೆ, ಅನುಭವದ ವೇಧ, ವಿವೇಕದ ವಾಣಿಯೂ ಇರುವುದನ್ನು ಕಾಣಬಹುದು. ಕೆಲವು ವಚನಗಳಲ್ಲಿ ಸಮಾಜದ ಗುಣ ದೋಷಗಳ ಚಿತ್ರಣವಿದೆ, ಬೋಧನೆಯಿದೆ. ಯಾರ ಬಿಡೆಯಿಲ್ಲದೆ, ಮುಚ್ಚುಮರೆಯಿಲ್ಲದೆ ಅವನು ಕಂಡದ್ದನ್ನಾಡಿದ್ದಾನೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಇಷ್ಟು ಮಟ್ಟಿನ ಸ್ವಾತಂತ್ರ್ಯ ಮನೋಧೈರ್ಯಗಳು ಬೇರೆಯವರಲ್ಲಿ ಕಾಣಸಿಗವು.

***Please cite this article as:*** ಜಯದೇವ ಸಿರಳ್ಳಿ. (2026). ಸರ್ವಜ್ಞನ ತ್ರಿಪದಿಗಳಲ್ಲಿ ಬಹುಮುಖ ಚಿಂತನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(2), 1–7

ಸರ್ವಜ್ಞನ ಸಮಗ್ರ ತ್ರಿಪದಿಗಳು ಸಾಮಾನ್ಯ ಪದ್ಯಗಳಂತೆ ತೋರಿದರೂ, ವಿಶೇಷ ಆಲೋಚನೆಗಳನ್ನು ಹೊಂದಿರುವಂತವು. ಸಾಮಾನ್ಯರ ನಡುವೆ ಬೆಳೆದರೂ ಸಾಮಾನ್ಯರು ವ್ಯಕ್ತಪಡಿಸಲಾರದಂತವು. ಆದರೆ ಸಾಮಾನ್ಯರು ಅವುಗಳನ್ನು ಪ್ರೀತಿಸಿದ್ದರಿಂದ ಅವು ಸಾರ್ವಜನಿಕ ಸ್ವತ್ತಾದವು. ಇವತ್ತಿಗೂ ಸಾಮಾನ್ಯರ ನಡುವೆ ಅವನ ತ್ರಿಪದಿಗಳು ಪರಿಮಳವನ್ನು ಬೀರುತ್ತಾ ಬಂದಿವೆ. ಜನಜೀವನದ ಓರೆಗಲ್ಲಾಗಿವೆ. "ಆಡು ಮುಟ್ಟದ ಸೊಪ್ಪಿಲ್ಲ, ಸರ್ವಜ್ಞ ಹೇಳದ ವಿಷಯವಿಲ್ಲ" ಎನ್ನುವಂತೆ ಅವನ ಲೋಕಾನುಭವ ವಿಶಾಲವಾದುದು. ಹೀಗಾಗಿ ಅವನ ಚಿಂತನೆಯು ಬಹುಮುಖವಾಗಿದೆ.

ಸರ್ವಜ್ಞನು ತನ್ನ ತ್ರಿಪದಿಯಲ್ಲಿ ಜ್ಯಾತಿ ವ್ಯವಸ್ಥೆ ಖಂಡನೆ, ಡಾಂಭಿಕ ಭಕ್ತಿಯ ವಿಡಂಭನೆ, ಗುರುವಿನ ಮಹತ್ವ, ದಾನದ ಮಹತ್ವ, ಸಜ್ಜನರ ಸಂಗ ಮುಂತಾದ ವಿಚಾರಗಳನ್ನು ತಿಳಿಸಿರುವವನು. ಅವುಗಳನ್ನು ತಿಳಿಯುವುದು ಈ ಲೇಖನದ ಉದ್ದೇಶವಾಗಿದೆ.

**ಜಾತಿ ವ್ಯವಸ್ಥೆ ಖಂಡನೆ**

ಸರ್ವಜ್ಞನು ವಚನಕಾರರ ಆದರ್ಶಗಳನ್ನು ತುಂಬಿಕೊಂಡಿರುವವನು. ಬಸವಾದಿಗಳು ಬಂದು ಹೋಗಿ ನಾಲ್ಕು ಶತಮಾನಗಳಾಗಿದ್ದರೂ ಸಾಮಾಜಿಕ ವ್ಯವಸ್ಥೆಯ ಕೊಳೆ ಕಡಿಮೆಯಾಗದಿದ್ದುದನ್ನು ಕಂಡು ಸಿಡಿದೇಳುತ್ತಾನೆ. ಸಾರ್ವಕಾಲಿಕ ಮೌಲ್ಯಗಳನ್ನು ಕುರಿತು ಈತನು ಹೇಳುವುದಕ್ಕಿಂತಲೂ ಹೆಚ್ಚಾಗಿ ಸಾಮಾಜಿಕ ಅನ್ಯಾಯವನ್ನು ಖಂಡಿಸುತ್ತಾನೆ. ಕೊಳೆತು ನಾರುವ ಸಾಮಾಜಿಕ ವ್ಯವಸ್ಥೆಯ ಹೀನ ಸ್ಥಿತಿಗೆ ಕಾರಣವಾಗಿರುವ ಸಮಾಜದಲ್ಲಿ ತಾಂಡವವಾಡುತ್ತಿರುವ ಜಾತಿ ಆಧಾರಿತ ತಾರತಮ್ಯವನ್ನು ಜನಪದ ಸೊಗಡಿನಿಂದ ಕೂಡಿದ ಮಾತುಗಳಲ್ಲೆ ತರಾಟೆಗೆ ತೆಗೆದುಕೊಳ್ಳುತ್ತಾನೆ.

***"ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು***
***ಸುಡುವಗ್ನಿಯೊಂದೇ ಇರುತಿರಲು ಕುಲಗೋತ್ರ***
***ನಡುವೆ ಎತ್ತಣದು? ಸರ್ವಜ್ಞ"*** [1]

***"ಹಾರುವರು ಸ್ವರ್ಗದಾ ದಾರಿಯನು ಬಲ್ಲರೇ?***
***ನಾರಿ ಪತಿವ್ರತದಿ ನಡೆದಿಹರೆ ಸ್ವರ್ಗದ***
***ದಾರಿದೋರುವಳು ಸರ್ವಜ್ಞ"*** [2]

***"ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೆ***
***ಜಾತಿ ವಿಜಾತಿಯೆನಬೇಡ ದೇವನೊಲಿ***
***ದಾತನೇ ಜಾತ ಸರ್ವಜ್ಞ"*** [3]

ಹೀಗೆ ಸರ್ವಜ್ಞನು ತನ್ನ ತ್ರಿಪದಿಯ ಮೂಲಕ ಸಮಾಜದಲ್ಲಿರುವ ಜಾತಿ ವ್ಯವಸ್ಥೆಯನ್ನು ಖಂಡಿಸಿದ್ದಾನೆ.

**ಧರ್ಮ ಜಿಜ್ಞಾಸೆ**

ಇಂದು ದೇಶದಲ್ಲಿ ಅಸಹಿಷ್ಣತೆ ಹೆಚ್ಚಾಗಿದೆ. ಧರ್ಮ ಧರ್ಮಗಳ ಮಧ್ಯೆ ಘರ್ಷಣೆ ನಡೆದು ಭಯೋತ್ಪಾದಕ ಚಟುವಟಿಕೆಗಳು ಹೆಚ್ಚಾಗಿವೆ. ಇಂತಹ ಸಾಮಾಜಿಕ ಸಂದರ್ಭದಲ್ಲಿ ಸರ್ವಜ್ಞನು ನೆನಪಾಗುತ್ತಾನೆ. ಸರ್ವಜ್ಞ ಅಂದಿನ ಕಾಲದಲ್ಲೇ ಧರ್ಮದ ಜಿಜ್ಞಾಸೆಯನ್ನು ತುಂಬ ಸರಳವಾಗಿ ಜನಪರವಾಗಿ ಬಿಡಿಸಿ ತೋರಿಸಿದ್ದಾನೆ. ಧರ್ಮವನ್ನು ಮಾನವನ ಆಚರಣೆ ಎಂದು ಸಾರಿದ್ದಾರೆ. ಅನ್ನದಾನ, ಸತ್ಯ, ಸಮಾನತೆ, ಕಳ್ಳತನ ಮಾಡದಿರುವುದು ಧರ್ಮದ ತಿರುಳು ಎಂದು ಸಾರಿದ್ದಾನೆ. ಅನಿತ್ಯವಾದ ಜೀವನದಲ್ಲಿ ಸ್ವಂತ ಹಿತಕ್ಕೆ ಗಂಟು ಬೀಳದೆ ಪರಹಿತದಲ್ಲಿ ಪರಮಾತ್ಮನ ಕೃಪಗೆ ಪಾತ್ರರಾಗಿ ಎಂಬುದು ಸರ್ವಜ್ಞನ ಧೋರಣೆಯಾಗಿದೆ.

---

[1]. ಸರ್ವಜ್ಞ ವಚನ, ಸಂ. ಶಾಂತವೀರಯ್ಯ, ಶ್ರೀದೇವಿ ಕುಮ್ಮುರ್, ವಾಸನ್ ಪಬ್ಲಿಕೇಷನ್, ಬೆಂಗಳೂರು, 2000, ಪು. ಸಂ– 119

[2]. ಅದೇ, ಪು. ಸಂ– 120

[3]. ಅದೇ, ಪು. ಸಂ– 120

***"ಅನ್ನವನು ಇಕ್ಕುವುದು ನನ್ನಿಯನು ನುಡಿಯುವುದು***
***ತನ್ನಂತೆ ಪರರ ಬಗೆದೊಡೆ ಕೈಲಾಸ***
***ಬಿನ್ನಾಣವಕ್ಕು ಸರ್ವಜ್ಞ"*** [4]

***"ಕೊಲುವ ಧರ್ಮವನೊಯ್ದು ಒಲೆಯೊಳಗೆ ಇಕ್ಕುವುದು***
***ಕೊಲಲಾಗನೆಂಬ ಜೈನನ ಮತವೆನ್ನ***
***ತಲೆಯ ಮೇಲಿರಲಿ ಸರ್ವಜ್ಞ"*** [5]

ಸರ್ವಜ್ಞನು ಯಾವುದೇ ಸ್ಥಳದಲ್ಲಿ ಒಳ್ಳೆಯವರಿದ್ದರೂ ತೆಗೆದುಕೊಳ್ಳುವ ಮುಕ್ತ ಮನಸ್ಸಿನವನು. ಜೈನ ಧರ್ಮದ ಒಳ್ಳೆಯ ಗುಣಗಳನ್ನು ಗೌರವದಿಂದ ಕಾಣುತ್ತಾನೆ.

**ದಾನದ ಪರಿಕಲ್ಪನೆ**

ಸರ್ವಜ್ಞನನು ದಾನವನ್ನು ಕುರಿತು ತನ್ನದೇ ಮಾತಿನಲ್ಲಿ ಹೇಳಿದ್ದಾನೆ. ಶೇಖರಣೆಗೊಂಡಿದ್ದನ್ನು ದಾಸೋಹದಿಂದ ವಿತರಣೆ ಮಾಡಿದಾಗಲೇ ಸುಖಿ ಸಮಾಜ ಸೃಷ್ಟಿಯಾಗಲು ಸಾಧ್ಯ ಎಂಬುದಕ್ಕೆ ಸರ್ವಜ್ಞ ಒತ್ತು ಕೊಟ್ಟಿದ್ದಾನೆ. ಗಳಿಸಬೇಕು, ಗಳಿಸಿದ್ದನ್ನು ಸರಿಯಾಗಿ ವಿನಿಯೋಗಿಸಬೇಕು. ದಾನಕ್ಕೆ ಯೋಗ್ಯರಾದವರಿಗೆ ದಾನ ಮಾಡಬೇಕು. ಅಪಾತ್ರರಿಗೆ ದಾನ ಮಾಡಬಾರದು ಎಂದು ದಾನದ ಪರಿಕಲ್ಪನೆಯನ್ನು ನೀಡಿದ್ದಾನೆ.

***"ಕೊಡುವವನೆ ಹರನು ಪಡೆಯುವಾತನೇ ನರನು***
***ಒಡಲ ಒಡವೆಗಳು ಕೆಡೆದು ಹೋಗದ ಮುನ್ನ***
***ಕೊಡು ಪಾತ್ರವರಿದು ಸರ್ವಜ್ಞ"*** [6]

ಕೊಡುವ ಅಂದರೆ ನೀಡುವ ಗುಣವುಳ್ಳವನೇ ದೇವರು. ಕೊಟ್ಟಿದ್ದನ್ನು ಪಡೆಯುವವನೇ ನರನು. ಮನುಷ್ಯ ಧರ್ಮ ದೊರೆಯುವುದು ದುರ್ಲಭ. ಮನುಜ ಜನ್ಮ ದೊರೆತಾಗ ಸತ್ಕಾರ್ಯಗಳನ್ನು ಮಾಡಿ ಕೃತಾರ್ಥರಾಗಬೇಕು. ನಮ್ಮ ಆಯುಷ್ಯ ತೀರುವ ಮುನ್ನ ಇತರರಿಗೆ ದಾನ ಮಾಡಬೇಕು. ದಾನ ಮಾಡುವಾಗಲಾದರೂ ದಾನಕ್ಕೆ ಯೋಗ್ಯರಾದವರಿಗೆ ದಾನ ಮಾಡಬೇಕು. ಅಪಾತ್ರರಿಗೆ ದಾನ ಮಾಡಬಾರದು ಎಂದು ಹೇಳಿದ್ದಾನೆ.

***"ಹೆಂಡಿರು ಮಕ್ಕಳೆಂದು ದಂಡಿಸದಿರು ದೇಹವನು***
***ಕಂಡ ವಸ್ತುವನು ಕೊಡದುಣದೆ ಬೈಚಿಡಲು***
***ಕಂಡವರಿಗಹುದು ಸರ್ವಜ್ಞ"*** [7]

ದೇಹವೆನ್ನುವುದು ಸತ್ಕಾರ್ಯಗಳನ್ನು ಮಾಡಲು ದೇವರು ಕೊಟ್ಟ ಸಾಧನ. ಅದನ್ನು ಕೇವಲ ನಮ್ಮ ಸ್ವಾರ್ಥಕ್ಕಾಗಿ ನಮ್ಮ ಹೆಂಡತಿ ಮಕ್ಕಳಿಗಾಗಿ ದಂಡಿಸಿದರೆ ನಾವು ಹತ್ತರಲ್ಲಿ ಹನ್ನೊಂದಾಗುತ್ತೇವೆ. ನಮ್ಮ ಬದುಕಿಗೇನೂ ವಿಶೇಷತೆ ಇರುವುದಿಲ್ಲ. ನಮ್ಮಲ್ಲಿರುವ ಸಂಪತ್ತನ್ನು ನಾವು ಬಳಸದೆ ಮತ್ತು ಇತರೆ ಸತ್ಕಾರ್ಯಗಳಿಗೂ ವಿನಿಯೋಗಿಸದಿದ್ದರೆ ಆ ಸಂಪತ್ತು ಕಂಡವರ ಪಾಲಾಗುತ್ತದೆ. ಹಾಗಾಗಬಾರದೆಂದರೆ ಸಂಪತ್ತನ್ನು ಸನ್ಮಾರ್ಗದಲ್ಲಿ ಗಳಿಸಬೇಕು ಮತ್ತು ಸತ್ಕಾರ್ಯದಲ್ಲಿ ವಿನಿಯೋಗಿಸಬೇಕು.

***"ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ***
***ಕೊಟ್ಟಿದ್ದು ಕೆಟ್ಟಿತೆನಬೇಡ ಮುಂದಕ್ಕೆ***
***ಕಟ್ಟಿಹುದು ಬುತ್ತಿ ಸರ್ವಜ್ಞ"*** [8]

ಸರ್ವಜ್ಞನು ದಾನವನ್ನು ಏಕೆ ಮಾಡಬೇಕು ಮತ್ತು ಏಕೆ ಮಾಡಬಾರದು ಎಂಬುದನ್ನು ಕೂಡಾ ತನ್ನದೇ

---

[4]. ಸರ್ವಜ್ಞ ವಚನ, ಸಂ. ಶಾಂತವೀರಯ್ಯ, ಶ್ರೀದೇವಿ ಕುಮ್ಮುರ್, ವಾಸನ್ ಪಬ್ಲಿಕೇಷನ್, ಬೆಂಗಳೂರು, 2000, ಪು. ಸಂ– 88

[5]. ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ, ಕಾಳೆಗೌಡ ನಾಗವಾರ, ಸಪ್ನ ಬುಕ್ ಹೌಸ್, ಬೆಂಗಳೂರು, 2009, ಪು. ಸಂ–20

[6]. ಸರ್ವಜ್ಞ ವಚನ, ಸಂ. ಶಾಂತವೀರಯ್ಯ, ಶ್ರೀದೇವಿ ಕುಮ್ಮುರ್, ವಾಸನ್ ಪಬ್ಲಿಕೇಷನ್, ಬೆಂಗಳೂರು, 2000, ಪು. ಸಂ– 90

[7]. ಸರ್ವಜ್ಞನ ಸಮಗ್ರ ತ್ರಿಪದಿಗಳು, ಸಂ, ರಾ ಗೌ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2013 ಪು ಸಂ– 80

[8]. ಸರ್ವಜ್ಞ ವಚನ, ಸಂ. ಶಾಂತವೀರಯ್ಯ, ಶ್ರೀದೇವಿ ಕುಮ್ಮುರ್, ವಾಸನ್ ಪಬ್ಲಿಕೇಷನ್, ಬೆಂಗಳೂರು, 2000, ಪು. ಸಂ– 90

ಮಾತಿನಲ್ಲಿ ಧಾನ-ಧರ್ಮ ಮಾಡದೇ ಸಂಪತ್ತು ಕೂಡಿಡುವವರನ್ನು ತಿವಿಯುವ ಕೆಲಸ ಮಾಡಿದ್ದಾನೆ.

***ತಿರಿದು ತಿಂದಾದೊಡೆ ಕರೆದು ಜಂಗಮಕಿಕ್ಕು***
***ಪರಿಣಾಮವಕ್ಕು ಪದವಕ್ಕು ಕೈಲಾಸ***
***ನೆರೆಮನೆಯಕ್ಕು ಸರ್ವಜ್ಞ"***[9]

ಒಂದೆಡೆ ಇದ್ದುದರಲ್ಲಿ ದಾನ ಮಾಡಬೇಕು. ಬಳಸಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ ಎಂದ ಸರ್ವಜ್ಞ, ಇಲ್ಲಿ ನೀನು ಭೀಕ್ಷೆ ಬೇಡಿದರೂ ಜಂಗಮರಿಗೆ ದಾನ ಮಾಡು. ಜಂಗಮರಿಗೆ ಮಾಡಿದ ದಾನ ಕೈಲಾಸ ಪದವಿಯನ್ನು ದೊರಕಿಸಿ ಕೊಡುವುದು. ಜಂಗಮರಿಗೆ ದಾನ ಮಾಡಿದರೆ ಕೈಲಾಸ ನಮ್ಮ ನೆರೆಮನೆಯಾಗಿರುವುದು ಎಂದು ದಾನದ ಮಹತ್ವ ಅದರಲ್ಲೂ ಜಂಗಮರಿಗೆ ಮಾಡುವ ದಾನದ ಮಹತ್ವವನ್ನು ಕುರಿತು ಹೇಳಿದ್ದಾನೆ.

***"ತಿರದು ತಂದಾದೊಡೆ ಕರೆದು ಕೊಂಡುಣಬೇಕು***
***ಕರೆಯದೆ ತಾನೆ ಉಣ್ಣುತಿರಲು ಆ ಊಟ***
***ನರಕದ ಊಟ ಸರ್ವಜ್ಞ"***[10]

ಭಿಕ್ಷೆ ಬೇಡಿ ತಂದುದರಲ್ಲಿಯೇ ಬೇರೆಯವರನ್ನು ಕರೆದು ಅವರಿಗೆ ಕೊಟ್ಟು ಉಣಬೇಕು. ಇಲ್ಲದಿದ್ದರೆ ಅದು ನರಕದ ಊಟ ಅಂದರೆ ವಿಷದ ಊಟವಾಗುತ್ತದೆ ಎಂದು ಹೇಳಿದ್ದಾನೆ.

***"ಉತ್ತಮ ದೇವಾಂಗವ ಸುತ್ತುವಡೆ ಉಡುವಡೆ***
***ಮತ್ತು ಮಾಣಿಕವೆ ತುಡುವಡೆ ಮಾಡು ನೀ***
***ನಿತ್ಯ ದಾನವನು ಸರ್ವಜ್ಞ"***[11]

ಪುಣ್ಯ ಸಂಪಾದನೆಗಾಗಿ, ಪಾಪ ಪರಿಹಾರಕ್ಕಾಗಿ ತೀರ್ಥಕ್ಷೇತ್ರಗಳನ್ನು ಸುತ್ತುವುದರಿಂದ, ದೇವರಿಗೆ ಮುತ್ತುರತ್ನಗಳನ್ನು, ಉಡುಗೆ-ತೊಡುಗೆಗಳನ್ನು ಮಾಡಿಸಿಕೊಡುವುದರಿಂದ ಏನೂ ಲಾಭವಿಲ್ಲ. ಅದರ ಬದಲಾಗಿ ಪ್ರತಿನಿತ್ಯ ಅಸಹಾಯಕರಿಗೆ ನಮ್ಮ ಕೈಲಾದಷ್ಟು ಸಹಾಯ ಮಾಡುವುದರಿಂದ ಪುಣ್ಯ ಪ್ರಾಪ್ತಿಯಾಗುವುದು ಎಂದು ಹೇಳಿದ್ದಾನೆ.

**ಡಾಂಭಿಕ ಭಕ್ತಿಯ ಖಂಡನೆ**

ಸರ್ವಜ್ಞ ಆಂತರಿಕ ವಿಮರ್ಶೆಯ ದಿಟ್ಟ ಧ್ವನಿ ಎಂದೇ ಹೇಳಬೇಕು. ಆಂತರಿಕ ವಿಮರ್ಶೆ ಇಲ್ಲದಿದ್ದಾಗ ಭಕ್ತಿ ಅಂಧಶ್ರದ್ಧೆಯಾಗುತ್ತದೆ, ಬಾಹ್ಯಾಡಂಬರವಾಗುತ್ತದೆ. ಅರ್ಥಹೀನ ಆಚರಣೆಗಳನ್ನು, ಡಾಂಭಿಕತೆಯನ್ನು ಸರ್ವಜ್ಞನು ಎಗ್ಗಿಲ್ಲದೆ ಖಂಡಿಸುತ್ತಾನೆ. ಧಾರ್ಮಿಕ ವ್ಯವಸ್ಥೆಯ ಕುರಿತಾದ ಅವನ ಜಿಜ್ಞಾಸೆ ಮೂಲಭೂತವಾಗಿ ಆತನ ನಿಸ್ಸಾಂಧಾನ ಪ್ರವೃತ್ತಿಯ ಸೂಕ್ಷ್ಮಾಭಿವ್ಯಕ್ತಿ ಎನ್ನಬಹುದು. ಈ ಪ್ರವೃತ್ತಿ ಮತ್ತು ಈ ಅಭಿವ್ಯಕ್ತಿ ಭಕ್ತಿ ಸಾಹಿತ್ಯದ ಪ್ರತಿಭಟನಾ ದ್ರವ್ಯವೆಂದು ತಿಳಿಯಬಹುದು. ಸರ್ವಜ್ಞನು ಸಾಮಾಜಿಕ ಮೌಢ್ಯವನ್ನು ಈ ಕೆಳಗಿನಂತೆ ಖಂಡಿಸುತ್ತಾನೆ.

***"ಚಿತ್ತವಿಲ್ಲದ ಗುಡಿಯ ಸುತ್ತಿದಡೆ ಫಲವೇನು?***
***ಎತ್ತು ಗಾಣವನು ಹೊತ್ತು ತಾ ನಿತ್ಯದಿ***
***ಸುತ್ತಿ ಬಂದಂತೆ ಸರ್ವಜ್ಞ"***[12]

ಮನಸಾ ಭಕ್ತಿ ಶ್ರದ್ಧೆಯಿಂದ ಪೂಜೆ ಮಾಡಿದರೆ ದೇವರು ಒಲಿಯುತ್ತಾನೆ. ಕಾಟಾಚಾರಕ್ಕೆ ಜಗತ್ತು ನೋಡಲಿ ಎಂಬ ಉದ್ದೇಶದಿಂದ ಪೂಜೆ-ಪುನಸ್ಕಾರಗಳನ್ನು ಮಾಡಿದರೆ ದೇವರು ಒಲಿಯುವುದಿಲ್ಲ. ಅದು ಎಳ್ಳು ಇಲ್ಲದ ಗಾಣವನ್ನು ಎತ್ತು ಸುತ್ತಿದಂತೆ ಅಂದರೆ ದೇವರ ಗುಡಿಯನ್ನು ಸುತ್ತಿದಂತಾಗುವುದು ಎಂಬ ಹೋಲಿಕೆಯನ್ನು ಸರ್ವಜ್ಞ ಕೊಡುತ್ತಾನೆ. ಡಾಂಭಿಕ ಭಕ್ತಿಯನ್ನು ಮತ್ತು ಮೂರ್ತಿ ಪೂಜೆಯನ್ನು ಸರ್ವಜ್ಞ ತನ್ನದೇ ಆದ ಚಾಟಿ ಏಟು ಕೊಟ್ಟು ಖಂಡಿಸುತ್ತಾನೆ.

**ಗುರುವಿನ ಅರಿವು**

---

[9]. ಸರ್ವಜ್ಞನ ಸಮಗ್ರ ತ್ರಿಪದಿಗಳು, ಸಂ, ರಾ ಗೌ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2013 ಪು ಸಂ- 82

[10]. ಅದೇ, ಪು ಸಂ- 82

[11]. ಸರ್ವಜ್ಞನ ಸಮಗ್ರ ತ್ರಿಪದಿಗಳು, ಸಂ, ರಾ ಗೌ, ಕನ್ನಡ ವಿಶ್ವವಿದ್ಯಾಲಯ, ಹಂಪಿ. 2013 ಪು ಸಂ- 81

[12]. ಸರ್ವಜ್ಞ ವಚನ, ಸಂ. ಶಾಂತವೀರಯ್ಯ, ಶ್ರೀದೇವಿ ಕುಮ್ಮುರ್, ವಾಸನ್ ಪಬ್ಲಿಕೇಷನ್, ಬೆಂಗಳೂರು, 2000, ಪು. ಸಂ- 85

"ಗುರು ಬ್ರಹ್ಮ, ಗುರು ವಿಷ್ಣು, ಗುರು ದೇವೋ ಮಹೇಶ್ವರ: ಗುರು ಸಾಕ್ಷಾತ್ ಪರಬ್ರಹ್ಮ" ಎಂದು ನಮ್ಮ ಋಷಿ ಮುನಿಗಳು ಹಾಡಿ ಹೊಗಳಿದರೆ "ಗುರು ಗೋವಿಂದ ಸೆ ಬಡಾ ಹೈ" ಎಂದು ಕಬೀರದಾಸರು ಗುರು ದೇವರಿಗಿಂತ ದೊಡ್ಡವನು ಎಂದು ಹೇಳಿದ್ದಾರೆ. ಗುರು ಅನಿಮಿತ್ಯ ಬಂಧು ಸಕಲ ಮನು ಕುಲಕ್ಕೆ. ಅವನ ದರ್ಶನ ಮಾತ್ರದಿಂದಲೇ ಜೀವನ ಪಾವನವಾಗುವುದು. ಗುರುವಿನ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ ಎಂದು ಗುರುವಿನ ಮಹತ್ವವನ್ನು ಕುರಿತು ಸರ್ವಜ್ಞನು ತ್ರಿಪದಿಗಳನ್ನು ರಚಿಸಿದ್ದಾನೆ. ಹರ ಮುನಿದರೂ ಗುರು ಕಾಯ್ವನು ಎಂಬ ನಂಬಿಕೆ ಸರ್ವಜ್ಞನದು.

***"ಊರಿಂಗೆ ದಾರಿಯನು ಆರು ತೋರಿದಡೇನು***
***ಸಾರಾಯದ ನಿಜವ ತೋರುವ ಗುರುವು ತಾನ್***
***ಆರಾದಡೇನು ಸರ್ವಜ್ಞ"***[13]

***"ಬಂಧುಗಳು ಆದವರು ಬಂದುಂಡು ಹೋಗುವರು***
***ಬಂಧನವ ಕಳೆಯಲರಿಯರು, ಗುರುವಿಂದ***
***ಬಂಧುಗಳು ಉಂಟೆ ಸರ್ವಜ್ಞ"***[14]

ಎಂದು ಗುರುವಿನ ಮಹತ್ವವನ್ನು ಕುರಿತು ಹೇಳಿದ್ದಾನೆ.

**ಸಮಾನತೆ**

ದೊರೆತ ಆಧಾರಗಳ ಪ್ರಕಾರ ಸರ್ವಜ್ಞನ ತಂದೆ ಮತ್ತು ತಾಯಿ ಬೇರೆ ಬೇರೆ ಜಾತಿಯವರು. ಈ ವಿಷಯ ಅವನನ್ನು ಜಾತಿ–ಕುಲಗಳಿಂದ ವಿಮುಖನನ್ನಾಗಿ ಮಾಡುತ್ತದೆ. ಜಾತಿ–ಕುಲ ಅಹಂಕಾರಗಳನ್ನು ಅವನು ದ್ವೇಷಿಸುವಂತೆ ಮಾಡುತ್ತದೆ. 'ಸಾಧನೆಯ ಛಲವಿದ್ದವನಿಗೆ ಚಿಕ್ಕಾಸಿನ ಕಿಮ್ಮತ್ತಿಲ್ಲದ ಕುಲ ಕಟ್ಟಿಕೊಂಡೇನು' ಎಂಬ ಧೋರಣೆ ಸರ್ವಜ್ಞನದು.

***"ನಡೆವುದೊಂದೇ ಭೂಮಿ ಕುಡಿವುದೊಂದೇ ನೀರು***
***ಸುಡುವಾಗ್ನಿಯೊಂದೆ ಇರುತಿರೆ ಕುಲಗೋತ್ರ***
***ನಡುವ ಎತ್ತಣದು ಸರ್ವಜ್ಞ"***[15]

***"ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೆ***
***ಜಾತಿ ವಿಜಾತಿ ಎನಬೇಡ ದೇವನೊಲಿ***
***ದಾತನೇ ಜಾತ ಸರ್ವಜ್ಞ"***[16]

***"ಕೊಂದು ತಿನ್ನುವ ಹೊಲೆಯನೆಂದು ನೀನೆನ ಬೇಡ***
***ನೊಂದ ಜೀವವನು ಅರಿವ ಹಾರುವನು ಆಡ***
***ಕೊಂದಾದ ಹೊಲೆಯ ಸರ್ವಜ್ಞ"***[17]

ಎನ್ನುವ ಮೂಲಕ ಸಮಾಜದಲ್ಲಿ ಬೇರೂರಿರುವ ಜಾತಿ–ಕುಲಗಳನ್ನು ಅಲ್ಲಗಳೆದು ಸಮಾನತೆಯ ಮಹತ್ವವನ್ನು ಸಾರಿದ್ದಾನೆ.

**ಸಜ್ಜನರ ಸಂಗ**

ಮಾನವ ಸಂಗಜೀವಿ. ಇತರರೊಂದಿಗೆ ಹೊಂದಿಕೊಂಡು ಆತ ಬಾಳಬೇಕು. ಹಾಗಾದರೆ ಯಾರೊಂದಿಗೆ ಹೊಂದಿಕೊಂಡು ಬಾಳಬೇಕು? ಸಜ್ಜನರೊಂದಿಗೆ ಹೊಂದಿಕೊಂಡು ಬಾಳಬೇಕು. 'ಅಸಂಸ್ಕೃತರೊಡನೆ ಸರಸವಾಡುವುದಕಿಂತ ಸುಸಂಸ್ಕೃತರೊಡನೆ ವಿರಸದಿಂದ ವಾದಕ್ಕಿಳಿಯುವುದು ಲಾಭ' 'ಸಗಣಿಯೊವನೊಡನೆ ಸರಸವಾಡುವುದಕ್ಕಿಂತ ಗಂಧದವನೊಡನೆ ಗುದ್ದಾಡುವುದು ಲೇಸು' ಎಂಬ ಮಾತುಗಳು ಸಜ್ಜನರ ಸಂಗದ ಮಹತ್ವವನ್ನು ತಿಳಿಸುತ್ತವೆ. ಸರ್ವಜ್ಞ ಸಜ್ಜನರ ಸಂಗ ಕುರಿತು ತನ್ನ ತ್ರಿಪದಿಗಳಲ್ಲಿ ಈ ರೀತಿ ಹೇಳಿದ್ದಾನೆ.

---

13. ಸರ್ವಜ್ಞ ವಚನ, ಸಂ. ಶಾಂತವೀರಯ್ಯ, ಶ್ರೀದೇವಿ ಕುಮ್ಮುರ್, ವಾಸನ್ ಪಬ್ಲಿಕೇಷನ್, ಬೆಂಗಳೂರು, 2000, ಪು. ಸಂ– 14
14. ಅದೇ, ಪು. ಸಂ– 14
15. ಅದೇ, ಪು. ಸಂ– 119
16. ಅದೇ, ಪು. ಸಂ– 120
17. ಅದೇ, ಪು. ಸಂ– 116

***"ಸಜ್ಜನರ ಸಂಗವದು ಹೆಜ್ಜೇನು ಕೊಡದಂತೆ***
***ದುರ್ಜನರ ಸಂಗದೊಡನಾಟ ಬಚ್ಚಲಿನ***
***ರೊಚ್ಚಿನಂತಿಹುದು ಸರ್ವಜ್ಞ"***[18]

***"ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ***
***ಅಲ್ಲದಹುದೆಂಬ ಅಜ್ಞಾನಿ ಯೊಡನಾಟ***
***ಕಲ್ಲು ಹಾದಂತೆ ಸರ್ವಜ್ಞ"***[19]

***"ಮಾನಹೀನರ ಸಂಗವೇನು ಕೊಟ್ಟರೂ ಬೇಡ***
***ಮಾನವುಳ್ಳವರ ಸಂಗ ತಾ ಸಕ್ಕರೆಯು***
***ಜೇನು ಸವಿದಂತೆ ಸರ್ವಜ್ಞ"***[20]

**ಉದ್ಯೋಗ ಕುರಿತ ಚಿಂತನೆ**

ಸಮಾಜ ಜೀವನವನ್ನು ಸರ್ವಜ್ಞನು ಸೂಕ್ಷ್ಮವಾಗಿ ನಿರೀಕ್ಷಿಸಿ, ಅದರ ವಿಮರ್ಶೆ ಮಾಡಿದುದಲ್ಲದೆ ತನ್ನ ತ್ರಿಪದಿಯಲ್ಲಿ ಸಮಾಜ ಕುರಿತು ಬೋಧನೆಯನ್ನು ಮಾಡಿದ್ದಾನೆ. ಜೀವನ ಮೌಲ್ಯಗಳನ್ನು ತನ್ನ ವಚನಗಳಲ್ಲಿ ವಿವರಿಸಿದ್ದಾನೆ, ಬಸವಣ್ಣನವರಿಗೆ "ಕಾಯಕವೇ ಕೈಲಾಸ"ವಾಗಿ ಕಂಡಂತೆ ಸರ್ವಜ್ಞನಿಗೆ ದುಡಿಮೆಯು ವ್ಯಕ್ತಿಯ ಹಾಗೂ ಸಮಾಜದ ಏಳಿಗೆಗೆ ಅವಶ್ಯಕವಾಗಿ ಕಂಡುಬಂದಿತು. ಅಂತೆಯೇ ಅವನು ಈ ರೀತಿ ಹೇಳಿದ್ದಾನೆ.

***"ಉದ್ಯೋಗವುಳ್ಳವನ ಹೊದ್ದುವುದು ಸಿರಿ ಬಂದು***
***ಉದ್ಯೋಗವಿಲ್ಲದಿರುವವನಾ ಕರದೊಳಗೆ***
***ಇದ್ದುದು ಪೋಕು ಸರ್ವಜ್ಞ"*** [21]

[18] . ಮಧ್ಯಕಾಲೀನ ಕನ್ನಡ ಕಾವ್ಯ ಮತ್ತು ಲೇಖನಗಳು, ಸಂ, ಡಾ. ದಸ್ತಗಿರ್ ಅಲ್ಲೇಬಾಯಿ, ಡಾ. ಎಂ. ಬಿ. ಹೂಗಾರ, ಪ್ರಸಾರಂಗ: ಕ.ವಿ.ವಿ ಧಾರವಾಡ, 2009 ಪು. ಸಂ–50

[19] . ಅದೇ, ಪು. ಸಂ–50

[20] . ಮಧ್ಯಕಾಲೀನ ಕನ್ನಡ ಕಾವ್ಯ, ಸಂ: ಎಸ್. ಎಮ್. ಕಾಚಾಪೂರ, ಪ್ರೊ. ಎಂ. ಎಸ್. ಯಲಿಗಾರ, ಪ್ರಸಾರಂಗ: ಕ ವಿ ವಿ ಧಾರವಾಡ, 2011, ಪು. ಸಂ–31

[21] . ಸರ್ವಜ್ಞ ವಚನ, ಸಂ. ಶಾಂತವೀರಯ್ಯ, ಶ್ರೀದೇವಿ ಕುಮ್ಮುರ್, ವಾಸನ್ ಪಬ್ಲಿಕೇಷನ್, ಬೆಂಗಳೂರು, 2000, ಪು. ಸಂ– 156

***"ಬೆಚ್ಚನಾ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ***
***ಇಚ್ಛೆಯನರಿವ ಸತಿಯಾಗಿ ಸ್ವರ್ಗಕ್ಕೆ***
***ಕಿಚ್ಚು ಹಚ್ಚೆಂದ ಸರ್ವಜ್ಞ"*** [22]

ಹೀಗೆ ಕೆಲಸ ಮಾಡುವ ಜನರಿಗೆ ಸಮಾಜದಲ್ಲಿ ಸಿಗುವ ಗೌರವವನ್ನು ಕುರಿತು ಅಂದೇ ಈ ಮಾತನ್ನು ಹೇಳಿದ್ದಾನೆ.

**ಸಮಾರೋಪ**

ಸರ್ವಜ್ಞನು ಸಮಾಜದ ಎಲ್ಲ ಬಗೆಯ ಅಸಮಾನತೆಯನ್ನು ಕಂಡು ಅದರ ವಿರುದ್ಧ ರೋಸಿಹೋಗಿರುವುದು ಕಂಡು ಬರುತ್ತದೆ. ಅನಕ್ಷರಸ್ಥ ಜನಗಳಿಂದಲೇ ತುಂಬಿದ ಈ ಸಮಾಜದಲ್ಲಿ ಅಸಮಾನತೆಯ ವಿರುದ್ಧ ತೀರಾ ಸರಳವಾಗಿ ಜನರ ಆಡು ಮಾತಿನಲ್ಲಿ, ತ್ರಿಪದಿಯ ಮೂಲಕ ಹೇಳ ಹೊರಟನು. ಪರಿಚಿತ ಕಥಾವಸ್ತುವನ್ನು ತೆಗೆದುಕೊಂಡು ಆ ಮೂಲಕ ಅನುಭವದ ವಿವಿಧ ಸ್ತರಗಳನ್ನು ಶೋಧಿಸುತ್ತಾ ಹೊರಡುವ ಕವಿಗಳ ದಾರಿಯನ್ನು ಸರ್ವಜ್ಞ ಹಿಡಿಯಲಿಲ್ಲ. ವೈಯಕ್ತಿಕ ಅನುಭವದ ಸೀಮೆಯಲ್ಲೇ ಅರ್ಥವನ್ನು ಹುಡುಕುತ್ತಾ ಹೊರಟು ಭಾವಗೀತಾತ್ಮಕ ವಚನಗಳ ಮೂಲಕ ಕಾವ್ಯವನ್ನು ಸಮರ್ಥವಾಗಿ ರಚಿಸಿದ ಬಸವಣ್ಣ, ಅಕ್ಕಮಹಾದೇವಿಯಂತೆ ಸಾಹಿತ್ಯ ರಚಿಸಲಿಲ್ಲ. ಬದಲಾಗಿ ಜಾನಪದ ಅಂತಃಸತ್ವದ ಮೂಲಕ ಅಸಮಾನತೆಯ ವಿರುದ್ಧ ಶ್ರೇಷ್ಠ ಮಟ್ಟದ ಹೋರಾಟವನ್ನು ಕೈಗೊಂಡ ಕನ್ನಡದ ಜನಪ್ರೀಯ ಕವಿಯಾಗಿದ್ದಾನೆ.

**ಆಕರ/ಪರಾಮರ್ಶನ ಗ್ರಂಥಗಳು**


- ಬಸವರಾಜ, ಎಲ್. (ಸಂ.). (2021). *ಸರ್ವಜ್ಞನ ವಚನಗಳು.* ಗೀತಾ ಬುಕ್ ಹೌಸ್.
- ಚನ್ನಪ್ಪ ಉತ್ತಂಗಿ. (ಸಂ.). (1999). *ಸರ್ವಜ್ಞನ ವಚನಗಳು.* ಪ್ರಕಾಶ ಸಾಹಿತ್ಯ.


[22] . ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ, ಕಾಳೆಗೌಡ ನಾಗವಾರ, ಸಪ್ನ ಬುಕ್ ಹೌಸ್, ಬೆಂಗಳೂರು, 2009, ಪು. ಸಂ–25

- ದಸ್ತಗಿರ್ ಅಲ್ಲೇಬಾಯಿ., ಎಂ. ಬಿ. ಹೂಗಾರ. (ಸಂ.) (2009). *ಮಧ್ಯಕಾಲೀನ ಕನ್ನಡ ಕಾವ್ಯ ಮತ್ತು ಲೇಖನಗಳು.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಕಾಚಾಪೂರ, ಎಸ್.ಎಮ್. ಮತ್ತು ಎಂ.ಎಸ್. ಯಲಿಗಾರ. (ಸಂ.). (2011). *ಮಧ್ಯಕಾಲೀನ ಕನ್ನಡ ಕಾವ್ಯ.* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಕಾಳೆಗೌಡ ನಾಗವಾರ. (2009). *ತ್ರಿಪದಿ, ರಗಳೆ ಮತ್ತು ಜನಪದ ಸಾಹಿತ್ಯ.* ಸಪ್ನ ಬುಕ್ ಹೌಸ್,
- ರಾಗೌ. (ಸಂ.). (2013). *ಸರ್ವಜ್ಞನ ಸಮಗ್ರ ತ್ರಿಪದಿಗಳು.* ಕನ್ನಡ ವಿಶ್ವವಿದ್ಯಾಲಯ.
- ಶಾಂತವೀರಯ್ಯ ಮತ್ತು ಶ್ರೀದೇವಿ ಕುಮ್ಮುರ್. (ಸಂ.) (2000). ಸರ್ವಜ್ಞ ವಚನ, ವಾಸನ್ ಪಬ್ಲಿಕೇಷನ್,